# ಪರಿಪೂರ್ಣ ಜೀವನದ ಅನ್ವೇಷಣೆಯಲ್ಲಿ

## ಸ್ವಾಮಿ ಮುಕ್ತಿದಾನಂದ

ಆಧುನಿಕ ಜೀವನಶೈಲಿಯು ತಂದೊಡ್ಡಿರುವ ಸವಾಲುಗಳ ಹಿನ್ನೆಲೆಯಲ್ಲಿ ವ್ಯಕ್ತಿಯು ತನ್ನ ವೈಯಕ್ತಿಕ ಹಾಗೂ ಸಾಮುದಾಯಿಕ ಬದುಕಿನಲ್ಲಿ ಸಾರ್ಥಕತೆಯನ್ನು ಕಂಡುಕೊಂಡು ಪರಿಪೂರ್ಣ ಜೀವನವನ್ನು ನಡೆಸುವುದು ಹೇಗೆ ಎಂಬ ಬಗ್ಗೆ ತಮ್ಮ ಚಿಂತನೆಗಳನ್ನು ಮಂಡಿಸಿರುವ ಸ್ವಾಮಿ ಮುಕ್ತಿದಾನಂದಜಿ ಮೈಸೂರಿನ ಶ್ರೀರಾಮಕೃಷ್ಣ ವಿದ್ಯಾಶಾಲೆಯ ಕಾರ್ಯನಿರ್ವಾಹಕರಾಗಿರುವರು.

**ಯಾವ** ರೀತಿಯ ಜೀವನ ನಡೆಸಿದರೆ ನಾವು ನಿಜವಾದ ಸಾರ್ಥಕತೆಯನ್ನು ಪಡೆಯಬಹುದು? ವಿಸ್ಮಯದಿಂದ ತುಂಬಿದ ಭೂಮಿಯ ಮೇಲಿನ ಈ ಸೀಮಿತ ಬದುಕಿನ ವೈಶಿಷ್ಟ್ಯವೇನು? ನಾವು ಅನಿವಾರ್ಯವಾಗಿ ದಿನನಿತ್ಯ ಎದುರಿಸುತ್ತಿರುವ ಸುಖದುಃಖ, ನೋವುನಲಿವು ಹುಟ್ಟುಸಾವು ಹಾಗೂ ಕಷ್ಟಕಾರ್ಪಣ್ಯಗಳ ಅರ್ಥವೇನು? ಇವುಗಳನ್ನು ಎದುರಿಸಲು ಬೇಕಾದ ಶಕ್ತಿಯನ್ನು ಎಲ್ಲಿಂದ ಪಡೆಯಬಹುದು? ಹೇಗೆ ಬಾಳಿದರೆ ನಾವು ನಿಜವಾದ ಶಾಂತಿ, ಸಂತೋಷ ಮತ್ತು ಪರಿಪೂರ್ಣತೆಯನ್ನು ಪಡೆಯಬಹುದು? ಈ ನಶ್ವರ ದೇಹವನ್ನು ಸವೆಸಿ ಜೀವನಯಾತ್ರೆಯನ್ನು ಮುಗಿಸುವ ಮೊದಲು ನಾವು ನಮ್ಮ ಬಗ್ಗೆ ಆವಶ್ಯಕವಾಗಿ ತಿಳಿಯಬೇಕಾಗಿರುವುದು ಏನು? ನಮ್ಮ ವ್ಯಕ್ತಿತ್ವದ ಶಾಶ್ವತ ಮೂಲ ಯಾವುದು? ಈ ವಿಶಾಲವಾದ ಸೃಷ್ಟಿಯನ್ನು ನಿಯಂತ್ರಿಸುವ ಶಕ್ತಿ ಯಾವುದು? ನಮ್ಮ ಜೀವನದ ಆಗುಹೋಗುಗಳನ್ನು ನಿಯಂತ್ರಿಸುವ ಒಂದು ಪರಮ ಶಕ್ತಿ ಇದೆಯೇ? ಈ ರೀತಿಯ ಹಲವಾರು ಪ್ರಶ್ನೆಗಳು ಪ್ರತಿಯೊಬ್ಬ ಚಿಂತನಶೀಲ ವ್ಯಕ್ತಿಗೆ, ಸುಶಿಕ್ಷಿತ ಮನಸ್ಸಿಗೆ ಸಹಜವಾಗಿ ಕಾಡುವ ಮಾರ್ಮಿಕ ಮತ್ತು ಶಾಶ್ವತ ಸವಾಲುಗಳು. ತನ್ನ ದೈಹಿಕ ಆವಶ್ಯಕತೆಗಳನ್ನು ಪೂರೈಸಿಕೊಂಡ ಮಾನವನ ಬೌದ್ಧಿಕ, ಭಾವುಕ ಜೀವನದಲ್ಲಿ ಈ ರೀತಿಯ ಪ್ರಶ್ನೆಗಳು ಉದ್ಭವವಾಗುತ್ತಲೇ ಬಂದಿವೆ. ಇಂತಹ ಪ್ರಶ್ನೆಗಳ ಪರಿಹಾರದ ಅನ್ವೇಷಣೆಯಲ್ಲಿ ನಿಜವನ್ನು ಕಂಡುಕೊಳ್ಳುವ ಪ್ರಯತ್ನವೇ ಮನುಕುಲ ಗಳಿಸಿರುವ ಅಪಾರ ಜ್ಞಾನರಾಶಿಗೆ ಕಾರಣವಾಗಿದೆ.

ಜಗತ್ತಿನ ಎಲ್ಲ ದೇಶಗಳ ಜನರನ್ನೂ ಮನುಕುಲದ ಇತಿಹಾಸದುದ್ದಕ್ಕೂ ಚಕಿತಗೊಳಿಸಿರುವ ಪ್ರಶ್ನೆಗಳ ಕಡೆ ನಾವಿಂದು ಗಮನ ಹರಿಸಬೇಕಾಗಿದೆ. ನಮ್ಮ ಈ ಕ್ಷಣಿಕವಾದ ಬದುಕು ಸಾವಿರಾರು ವರ್ಷಗಳಿಂದ ಹರಿದು ಬಂದ ಜೀವನಪ್ರವಾಹದ ಒಂದು ಲೇಶಮಾತ್ರ. ವರ್ತಮಾನದ ಜೀವನ ಶೈಲಿಗೂ ಮತ್ತು ಪುರಾತನ ಜೀವನದ ರೀತಿನೀತಿಗಳಿಗೂ ವ್ಯತ್ಯಾಸ ಅನಿವಾರ್ಯವಾದರೂ, ಮಾನವನ ಇತಿಹಾಸವನ್ನು ಪರಿಶೀಲಿಸಿ ಅದರ ಮೂಲಕ ಈಗಿನ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಹಿಡಿಯಲು ಪ್ರಯತ್ನ ಮಾಡಬೇಕು. ಕಳೆದುಹೋದ ಭೂತಕಾಲದೊಂದಿಗೆ ವರ್ತಮಾನದ ರಚನಾತ್ಮಕ ಸಂಬಂಧದ ಒಂದು ಕೊಂಡಿಯನ್ನು ಕಂಡುಕೊಳ್ಳುವುದು ಮನುಷ್ಯನ ಪ್ರಗತಿಗೆ ಅನಿವಾರ್ಯ.

ಯುವ ವೇದಿಕೆ

ತಮಸೋ ಮಾ ಜ್ಯೋತಿರ್ಗಮಯ

### ಜೀವನದ ಆಂತರಿಕ ಮತ್ತು ಬಾಹ್ಯ ಸಮಸ್ಯೆಗಳ ಪಕ್ಷಿನೋಟ

ಇತ್ತೀಚಿನ ದಶಕಗಳಲ್ಲಿ ಆರ್ಥಿಕ, ತಾಂತ್ರಿಕ ರಂಗಗಳಲ್ಲಿ ಆಗುತ್ತಿರುವ ಕ್ಷಿಪ್ರ ಬದಲಾವಣೆಗಳು ನಮ್ಮ ಕೌಟುಂಬಿಕ, ಸಾಮಾಜಿಕ ಬದುಕಿಗೆ ಹಿಂದೆಂದೂ ಕಾಣದ ಸವಾಲುಗಳನ್ನು ತಂದೊಡ್ಡಿವೆ. ಒಂದು ಕಡೆ ಕೈತುಂಬ ಹಣ ತರುವ ಉದ್ಯೋಗಗಳು, ಅಂತಸ್ತು, ಆಧುನಿಕ ಜೀವನಶೈಲಿ ಮುಂತಾದುವೇ ವ್ಯಕ್ತಿತ್ವದ ಬೆಳವಣಿಗೆ ಎಂಬ ಭ್ರಮೆಯನ್ನು ಹುಟ್ಟಿಸುತ್ತಿದ್ದರೆ, ಕೌಟುಂಬಿಕ ಸಂಬಂಧಗಳಲ್ಲಿ ವಿರಸ ಮೂಡಿ, ಮನುಷ್ಯ ಸಂಬಂಧಗಳು ಹದಗೆಡುತ್ತಿರುವುದು—ಇಷ್ಟೆಲ್ಲ ಬದಲಾವಣೆಗಳು ನಿಜವಾದ ಪ್ರಬುದ್ಧ ವ್ಯಕ್ತಿತ್ವವನ್ನು ಸಾಧಿಸಲು ನೆರವಾಗಿವೆಯೇ ಎಂಬ ಪ್ರಶ್ನೆಯನ್ನು ಕೆರಳಿಸುತ್ತವೆ. ಸಹಬಾಳ್ವೆಯ ಆವಶ್ಯಕತೆಗಳಿಗೆ ಸ್ಪಂದಿಸಲು ಅಸಮರ್ಥನಾದ ವ್ಯಕ್ತಿ ತನ್ನ ಹಾಗೂ ಸಮಾಜದ ದೃಷ್ಟಿಯಲ್ಲಿ ಕುಬ್ಜನಾಗುತ್ತಿದ್ದಾನೆ. ಹೀಗೆ ತನ್ನನ್ನು ಕುಗ್ಗಿಸುತ್ತಲಿರುವ ಆಂತರಿಕ ನ್ಯೂನತೆಗಳ ವಿರುದ್ಧ, ದೌರ್ಬಲ್ಯಗಳ ವಿರುದ್ಧ, ಪ್ರಮಾದ ಅಜ್ಞಾನಗಳ ವಿರುದ್ಧ ಸೆಣಸಾಡಲು ಅವನಿಗೆ ಬೇಕಾದ ಪ್ರೇರಣೆಗಳ ಅಭಾವವನ್ನು ನಾವಿಂದು ಕಾಣುತ್ತಿದ್ದೇವೆ. ನಮ್ಮ ಬದುಕಿನಲ್ಲಿ ನಾವೆಷ್ಟೇ ಧನಸಂಪಾದನೆ ಮಾಡಿದರೂ, ಸಂಪತ್ತನ್ನು ಗುಡ್ಡೆ ಹಾಕಿಕೊಂಡರೂ ಜೀವನದ ಬಗ್ಗೆ ನಮ್ಮ ಅರಿವಿನ ಮೇರೆಗಳು ವಿಸ್ತಾರಗೊಳ್ಳದೆ ಇರುವುದರಿಂದ, ನಾವು ನೆಮ್ಮದಿಯನ್ನು ಕಂಡುಕೊಳ್ಳಲು ಸಾಧ್ಯವಾಗುತ್ತಿಲ್ಲ. ಬದುಕು ನಿರಂತರ ವೈಶಾಲ್ಯವನ್ನು ಪಡೆದಾಗ ಮಾತ್ರ ಅದು

ಪರಿಪೂರ್ಣತೆಯತ್ತ ಸಾಗುತ್ತದೆ. ಇದಕ್ಕೆ ಮೊದಲ ಹೆಜ್ಜೆಯಾಗಿ ನಮ್ಮ ವೈಯಕ್ತಿಕ ಬದುಕಿನ ಸಮಸ್ಯೆಗಳನ್ನು ಮತ್ತಷ್ಟು ಸಂಕೀರ್ಣಗೊಳಿಸುತ್ತಿರುವ ಒಟ್ಟಾರೆ ವಾತಾವರಣವನ್ನು ನಾವು ವಸ್ತು ನಿಷ್ಠವಾಗಿ ನೋಡಬೇಕು.

ಆಧುನಿಕ ನಾಗರಿಕತೆಯ ದುಷ್ಪರಿಣಾಮಗಳು ಯುವಕರ ಮನಸ್ಸನ್ನು ಪೀಡಿಸುತ್ತಿರುವ ರೀತಿ ಶೋಚನೀಯವಾಗಿದೆ. ರಾಜಕೀಯ ಅಸ್ಥಿರತೆ, ಭ್ರಷ್ಟಾಚಾರ, ಸಾಮಾಜಿಕ ಅವ್ಯವಸ್ಥೆಗಳ ಜೊತೆಗೆ ಮಾಧ್ಯಮಗಳು ಯುವಕರ ಮನಸ್ಸನ್ನು ದುರ್ಬಲಗೊಳಿಸಿ, ದುಶ್ಚಟಗಳಿಗೆ ಬಹುಬೇಗನೆ ಬಲಿಯಾಗುವಂತೆ ಅವರನ್ನು ಸೆಳೆಯುತ್ತಿವೆ. ಸ್ವಾರ್ಥ, ಪೈಪೋಟಿ, ಮನೋರಂಜನೆ, ವಿಲಾಸ, ಸಿನಿಮಾ ತಾರೆಯರ ಮತ್ತು ಕ್ರಿಕೆಟ್ ಆಟಗಾರರ ಕಡೆಗಿನ ಮಿತಿಮೀರಿದ ಆಕರ್ಷಣೆಗೆ ಯುವಜನತೆ ಒಳಗಾಗಿರುವುದು ಒಂದು ಕಡೆಯಾದರೆ, ಮತ್ತೊಂದು ಕಡೆ ಹಿಂದೆಂದೂ ಕಾಣದ ಪ್ರಮಾಣದಲ್ಲಿ ಮಾದಕ ಪದಾರ್ಥಗಳ ಪ್ರಭಾವ ಎಲ್ಲೆಡೆ ತಾಂಡವವಾಡುತ್ತಿದೆ. ಇವೆಲ್ಲದರ ಹಿಂದೆ ಬಲವಾಗಿ ಬೇರೂರಿರುವ ಆಧುನಿಕ ಜಡವಾದ, ನಿರಂಕುಶವಾಗಿ ಬೆಳೆಯುತ್ತಿರುವ ತಂತ್ರಜ್ಞಾನಗಳನ್ನು ಆಧರಿಸಿದ ಜೀವನ ಶೈಲಿಗಳ ನಡುವೆ ಇವೆಲ್ಲವೂ ಸರ್ವೇ ಸಾಮಾನ್ಯವೆಂಬಂತೆ ಸಮಾಜ ಇವುಗಳನ್ನು ಪರಿಗಣಿಸುತ್ತಿದೆ. ವೃತ್ತಪತ್ರಿಕೆಗಳು, ಟಿ.ವಿ, ಅಂತರ್ಜಾಲ ಮುಂತಾದ ಮಾಧ್ಯಮಗಳು ತಂದೊಡ್ಡಿರುವ ಅಗಾಧ ಮಾಹಿತಿಯ ಹೊರೆ ನಮ್ಮ ಬುದ್ಧಿಗೆ ಸವಾಲಾಗಿ ನಮ್ಮ ಮಾನಸಿಕ ಒತ್ತಡ ಹಾಗೂ ಕ್ಲೇಶಗಳನ್ನು ಹೆಚ್ಚಿಸುತ್ತಿವೆ. ಇವು ಯಾವುವೂ ನಮ್ಮ ಸಾಮಾಜಿಕ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಸಹಾಯಕಾರಿಯಾಗಿಲ್ಲ. ಈಗಿನ ಸಮೂಹ ಮಾಧ್ಯಮಗಳು ಜನರ ಹೊಣೆಗಾರಿಕೆಯನ್ನು ಮರೆಸಿ, ಸಮಾಜದ ನಿಜವಾದ ಶ್ರೇಯಸ್ಸನ್ನು ಕಡೆಗಾಣಿಸುತ್ತಿವೆ. ತಮ್ಮ ವೈಯಕ್ತಿಕ ಲಾಭದಾಸೆಗಾಗಿ, ದೂರದೃಷ್ಟಿ ಇಲ್ಲದೆ, ನಮ್ಮ ಸಾಮಾಜಿಕ ಬದುಕನ್ನು ಅವನತಿಯತ್ತ ಕೊಂಡೊಯ್ಯುವ ಸಮೂಹ ಸನ್ನಿಯಲ್ಲಿ ನಿರತವಾಗಿವೆ. ಆರ್ಥಿಕ ಲಾಭವೊಂದನ್ನೇ ಉದ್ದೇಶವಾಗಿಟ್ಟುಕೊಂಡಿರುವ ಉಪಭೋಗಿ ಸಂಸ್ಕೃತಿಯ ಪ್ರಚಾರವೇ ಇಂದು ಮೇಲುಗೈ ಸಾಧಿಸಿದೆ. ಈ ಗೊಂದಲಗಳಲ್ಲಿ ಸಿಲುಕಿಕೊಂಡ ಯುವಜನಾಂಗದ ಆತ್ಮಬಲ ಕುಗ್ಗುತ್ತಿದೆ. ಹಿಂದೆಂದೂ ಕಾಣದ ಕೇಳದ ಸಮಸ್ಯೆಗಳ ಭಯಾರಣ್ಯದಲ್ಲಿ ಯುವಜನಾಂಗ ಸಿಲುಕಿಬಿದ್ದಿದೆ ಎಂಬಂತೆ ಭಾಸವಾಗುತ್ತಿದೆ. ತಾತ್ಕಾಲಿಕ ಮನರಂಜನೆ ಮತ್ತು ಸ್ವೇಚ್ಛಾವೃತ್ತಿಯಲ್ಲಿ ತಮ್ಮನ್ನು ತಾವು ಮರೆಯಲು ಯತ್ನಿಸುತ್ತಿರುವ ಯುವಜನಾಂಗದ ನಡೆ ತಮ್ಮ ಅಂತರಂಗದಲ್ಲಿ ಅವರು ಅನುಭವಿಸುತ್ತಿರುವ ಶೂನ್ಯಕ್ಕೆ ಕನ್ನಡಿ ಹಿಡಿದಂತಿದೆ.

ನಾವಿಂದು ಪ್ರತಿನಿತ್ಯ ನೋಡುತ್ತಿರುವ ವ್ಯಕ್ತಿಗಳ, ಕುಟುಂಬಗಳ, ಸಂಘಸಂಸ್ಥೆಗಳ, ಜಾತಿಗಳ ಹಾಗೂ ದೇಶದೇಶಗಳ ನಡುವಣ ಭಿನ್ನಾಭಿಪ್ರಾಯ, ಮತ್ಸರ, ದ್ವೇಷ, ಕಲಹ, ಕದನ ಮತ್ತು ವಿವಿಧ ರೀತಿಯ ಹಿಂಸಾಪ್ರವೃತ್ತಿಯ ವಿಕೃತ ಪ್ರದರ್ಶನವೆಲ್ಲ ಇದರ ಪರಿಣಾಮವೇ. ಸಾಮಾನ್ಯ ಮನುಷ್ಯ ಇದರ ಬಗ್ಗೆ ಚಿಂತಿಸುತ್ತಾ ಇದನ್ನು ನೋಡುತ್ತಾ ಅಸಹಾಯಕನಾಗಿ ಪರಿಹಾರ ಕಾಣದೆ ಬಳಲುತ್ತಿದ್ದಾನೆ.

**ಪರಿವರ್ತನಶೀಲ ನವಸಮಾಜದ ನಿರ್ಮಾಣ ಹೇಗೆ ಸಾಧ್ಯ?**

ಈ ಪರಿಸ್ಥಿತಿಯಲ್ಲಿ ಒಂದು ಹೊಸ ಪರಿವರ್ತನಶೀಲ ಮತ್ತು ಆದರ್ಶ ಸಮಾಜವನ್ನು ಹುಟ್ಟುಹಾಕುವುದು ಹೇಗೆ ಸಾಧ್ಯ? ಎಲ್ಲಿಂದ ಪ್ರಾರಂಭಿಸೋಣ, ಹೇಗೆ ಪ್ರಾರಂಭಿಸೋಣ? ವ್ಯಕ್ತಿ ಮತ್ತು ಸಮಾಜದ ಗತಿಯನ್ನು ಶ್ರೇಯಸ್ಸಿನ ಕಡೆ ತಿರುಗಿಸಲು ಸಾಧ್ಯವೇ? ಯಾರಿಗೆ, ಯಾವ ಶಕ್ತಿಗೆ ಇದು ಸಾಧ್ಯ? ಯಾವುದೇ ಪರಿಣಾಮಕಾರಿಯಾದ ಪರಿವರ್ತನೆಗೆ ಆರಂಭವು ವ್ಯಕ್ತಿಮಟ್ಟದಿಂದಲೇ ಆಗಬೇಕು. ವ್ಯಕ್ತಿ ತನ್ನಲ್ಲಿ ನೆಮ್ಮದಿಯನ್ನು ಕಂಡುಕೊಳ್ಳುವ ಕಲೆಯನ್ನು ಕಂಡುಕೊಂಡರೆ ತನ್ನ ಸುತ್ತಮುತ್ತಲ ಪರಿಸರದಲ್ಲಿ ಆ ನೆಮ್ಮದಿಯ ಪ್ರಭಾವವನ್ನು ಬೀರುತ್ತಾನೆ, ಹಾಗೆ ಆ ನೆಮ್ಮದಿಯ ಪರಿಧಿ ವಿಸ್ತರಿಸುತ್ತಾ ಹೋಗುತ್ತದೆ. ವ್ಯಕ್ತಿಗೆ ನಿಜವಾದ ನೆಮ್ಮದಿಯನ್ನು ತಂದು ಕೊಡುವ ಸಾಮರಸ್ಯದ ಜೀವನ ಹೇಗೆ ಸಾಧ್ಯ? ಹೇಗೆ ಜೀವನ ನಡೆಸಿದರೆ ಶ್ರೇಯಸ್ಸನ್ನು ಸಾಧಿಸಬಹುದು? ಸಫಲ ಜೀವನದ ನಿಯಮಗಳಾವುವು? ಇದಕ್ಕೆ ಬೇಕಾದ ಶಿಕ್ಷಣ ಮತ್ತು ಜೀವನಕಲೆಯನ್ನು ಎಲ್ಲಿಂದ ಪಡೆಯಬಹುದು? ಇದು ಇಂದಿನ ಪ್ರತಿಯೊಬ್ಬ ಪ್ರಜ್ಞಾವಂತನನ್ನು ಕಾಡುತ್ತಿರುವ ಮೂಲಭೂತ ಪ್ರಶ್ನೆ. ಈ ಮೂಲಭೂತ ಪ್ರಶ್ನೆಗಳು ಮನುಕುಲದ ಇತಿಹಾಸದುದ್ದಕ್ಕೂ ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿರುವ ಪ್ರಜ್ಞಾವಂತರನ್ನು ಕಾಡುತ್ತಲೇ ಬಂದಿವೆ. ಈ ಪ್ರಶ್ನೆಗಳನ್ನು ನಮ್ಮ ಅಂತರಂಗದಲ್ಲಿ ಎದುರಿಸುವುದರಿಂದ ಮಾತ್ರವೇ ನಮ್ಮ ಅರಿವಿನ ಮೇರೆಗಳು ವಿಸ್ತಾರಗೊಳ್ಳುತ್ತವೆ. ಆದರೆ ಬದುಕಿನಲ್ಲಿ ಅಡಕವಾಗಿರುವ ಮೂಲಭೂತ ಕಾಳಜಿಗಳಿಂದ ನಮ್ಮ ವೈಯಕ್ತಿಕ ಮತ್ತು ಸಾಮುದಾಯಿಕ ಬದುಕಿನ ರೀತಿನೀತಿಗಳನ್ನು ಬೇರ್ಪಡಿಸಿರುವುದೇ, ಆಧುನಿಕ ಯುಗದಲ್ಲಿ ನಾವು ಪರಿಹರಿಸಲು ಆಗದೆ ಕೈಚೆಲ್ಲಿ ಕುಳಿತಿರುವುದೇ ಬಹುತೇಕ ಸಮಸ್ಯೆಗಳಿಗೆ ಕಾರಣವಾಗಿದೆ. ಕೇವಲ ಶಾಲಾ ಕಾಲೇಜುಗಳಿಗೆ ಹೋಗಿ ವ್ಯಾಸಂಗ ಮಾಡಿದ ಮಾತ್ರಕ್ಕೆ ಒಬ್ಬ ವ್ಯಕ್ತಿಯು ಜೀವನದಲ್ಲಿ ಎದುರಾಗುವ ಈ ಪ್ರಶ್ನೆಗಳನ್ನು ನಿವಾರಿಸಿಕೊಳ್ಳುತ್ತಾನೆ ಅಥವಾ ಜೀವನವನ್ನು ಕುರಿತು ಹೊಸ ಬೆಳಕಿನಲ್ಲಿ ಆಲೋಚಿಸುತ್ತಾನೆ ಎಂದು ಹೇಳಲಾಗದು. ಇಂದಿನ ದಿನಗಳಲ್ಲಂತೂ ಯಾಂತ್ರಿಕ ಬದುಕೇ ಹೆಚ್ಚು ಪ್ರಧಾನವಾಗಿ, ಆತ್ಮಾವಲೋಕನಕ್ಕೆ ಆಸ್ಪದವೇ ಇಲ್ಲದಂತಾಗಿದೆ.

**ವ್ಯಕ್ತಿತ್ವದ ನಿಜವಾದ ಬೆಳವಣಿಗೆಗೆ ಪೂರಕವಾದ ಶಿಕ್ಷಣವನ್ನು ಒದಗಿಸುವುದು**

ಇಂಥ ಸನ್ನಿವೇಶಗಳಲ್ಲಿ ಬೆಳೆಯುತ್ತಿರುವ ಮಗುವಿಗೆ ಉತ್ತಮ ಆದರ್ಶಗಳು, ಜೀವನಾವಶ್ಯಕವಾದ ಜ್ಞಾನ, ವೈಚಾರಿಕ ಸಿದ್ಧತೆ, ಸಹಜೀವನದ ಸೂತ್ರ ಇವು ಎಲ್ಲಿಂದ ಲಭ್ಯವಾಗುವುವು? ಮನೆಯಲ್ಲಿ ತಂದೆ-ತಾಯಿಗಳಿಂದಲೇ? ಶಾಲೆಯಲ್ಲಿ ಅಧ್ಯಾಪಕರು ಮತ್ತು ಮಿತ್ರವರ್ಗದಿಂದಲೇ? ಸಮಾಜ ಮತ್ತು ಮಾಧ್ಯಮಗಳ ಮೂಲಕವೆ? ಇಂದಿನ ಪರಿಸ್ಥಿತಿ ಹೇಗಿದೆಯೆಂದರೆ ಕೋಟ್ಯಂತರ ಜನರಲ್ಲಿ ಕೆಲವರು ಮಾತ್ರ ಪ್ರಜ್ಞಾವಂತರಾಗಿ ನಿಜವಾದ ಅರ್ಥದಲ್ಲಿ ಬೆಳವಣಿಗೆಯನ್ನು ಹೊಂದಿದ್ದಾರೆ. ಕೆಲವರು ಧರ್ಮ, ಆಧ್ಯಾತ್ಮಿಕ ಮತ್ತು ನೈತಿಕ ಜೀವನದಲ್ಲಿ ಮುಂದುವರೆದಿರಬಹುದು; ಮತ್ತೆ ಕೆಲವರು ತಾಂತ್ರಿಕ ಜ್ಞಾನ, ಸಾಹಿತ್ಯ ಮತ್ತು ಕಲೆಯಲ್ಲಿ ಹೆಸರು ಮಾಡಿರಬಹುದು. ಆದರೆ ದೇಶದ ನಿಜವಾದ ಪ್ರಗತಿಯನ್ನು ಸೂಚಿಸುವ ಬಹುಸಂಖ್ಯೆಯ ಜನಸಾಮಾನ್ಯರ ಜೀವನ ಯಾವ ಗುಣಮಟ್ಟದಲ್ಲಿದೆ? ಅವರ ಮನೋಧರ್ಮದಲ್ಲಿ ಬದಲಾವಣೆಯನ್ನು ತರಲು ಸಾಧ್ಯವಾಗಿದೆಯೆ? ಎಷ್ಟು ಜನ ಬೌದ್ಧಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ, ವೈಜ್ಞಾನಿಕವಾಗಿ ಹಾಗೂ ಆರ್ಥಿಕವಾಗಿ ಮುಂದುವರೆದಿದ್ದಾರೆ ಎಂಬುದು ನಾವು ತುಲನಾತ್ಮಕವಾಗಿ ಗಮನಿಸಬೇಕಾದ ವಿಷಯ. ಮನುಕುಲದ ಇತಿಹಾಸದುದ್ದಕ್ಕೂ ಅನೇಕ ಪ್ರಜ್ಞಾವಂತರ ತಪಸ್ಸಿನಿಂದ ಲಭಿಸಿರುವ ಅನರ್ಘ್ಯ ಜ್ಞಾನರಾಶಿಯು ಅನೇಕ ವರ್ಷಗಳ ಕಾಲ ಕೆಲವೇ ಜನರ ಸ್ವತ್ತಾಗಿ ಉಳಿದು, ಜನಮಾನಸವನ್ನು ರೂಪಿಸಬೇಕಾದ ಪ್ರಮಾಣದಲ್ಲಿ ಅದು ಜನರನ್ನು ತಲುಪಲೇ ಇಲ್ಲ. ಶಿಕ್ಷಣದ ಮೂಲ ಉದ್ದೇಶವೇ ಈ ಜ್ಞಾನಸಂಜೀವಿನಿಯನ್ನು ಸಾಮಾನ್ಯ ಜನರತ್ತ ಕೊಂಡೊಯ್ಯುವುದು. ಆದರೆ ಶ್ರೇಯಸ್ಕರ ಜೀವನವನ್ನು ನಡೆಸಲು ಬೇಕಾದ ಈ ಜ್ಞಾನ, ಶಿಸ್ತು, ಆದರ್ಶ ಮತ್ತು ಮೌಲ್ಯಗಳನ್ನು ಈಗಿನ ಶಿಕ್ಷಣ ಪದ್ಧತಿಯಿಂದ ವಿತರಿಸಲಾಗದೆ ಇರುವುದರಿಂದ ಯುವಜನಾಂಗ ದಾರಿ ತಪ್ಪಿದಂತಾಗಿದೆ.

ಈ ಜ್ಞಾನಸಂಜೀವಿನಿಯನ್ನು ನಮ್ಮ ಶಾಲಾಕಾಲೇಜುಗಳ ಶಿಕ್ಷಣ ಪದ್ಧತಿಯಲ್ಲಿ ನಿರ್ಲಕ್ಷಿಸಿರುವುದೇ ನಮ್ಮನ್ನು ಕಿತ್ತು ತಿನ್ನುತ್ತಿರುವ ಸಮಸ್ಯೆಗಳಿಗೆ ಕಾರಣವಾಗಿದೆ. ಇಂದು ಶಾಲಾಕಾಲೇಜುಗಳಲ್ಲಿ ನೀಡಲಾಗುತ್ತಿರುವ ಶಿಕ್ಷಣ ಮೌಲ್ಯರಹಿತವಾಗಿದ್ದು, ಮನುಷ್ಯ ಸ್ವಭಾವವನ್ನು ಪರಸ್ಪರ ಅರಿತು, ಬದುಕಿನ ನೈಜ ಪಾಠವನ್ನು ಸರಿಯಾದ ರೀತಿಯಲ್ಲಿ ತಿಳಿಸಲು ಸಮರ್ಥವಾಗಿಲ್ಲ. ಹೀಗಾಗಿ ಎಲ್ಲಾ ಹಂತಗಳಲ್ಲೂ ಮನುಷ್ಯ ಸಂಬಂಧಗಳು ಕುಸಿಯುತ್ತಿವೆ. ಎಲ್ಲೆಲ್ಲೂ ಅತೃಪ್ತಿ ಹಾಗೂ ಹಿಂಸೆ ತಾಂಡವವಾಡುತ್ತಿವೆ. ಸಾವಿರಾರು ವರ್ಷಗಳಿಂದ ಬಂದಿರುವ ಸಂಸ್ಕೃತಿ, ಜೀವನಪದ್ಧತಿಯ ಅರ್ಥ ಮತ್ತು ಅದರ ಪ್ರಸ್ತುತತೆಯನ್ನು ಈಗ ನಾವು ಮತ್ತೆ ಮಥಿಸಿ, ಪರಿಷ್ಕರಿಸಿ ಇಂದಿನ ಯುಗಧರ್ಮಕ್ಕೆ ಹೊಂದುವಂತೆ ಯುವಜನಾಂಗಕ್ಕೆ ನೀಡಬೇಕಾದಂಥ ಅನಿವಾರ್ಯ ಪರಿಸ್ಥಿತಿ ಬಂದೊದಗಿದೆ. ಮುಖ್ಯವಾಗಿ ಸಹಬಾಳ್ವೆಯ ಕಲೆಯನ್ನು ತಿಳಿಸಿಕೊಡುವ ಮೌಲ್ಯಾಧಾರಿತ ಸಮಗ್ರ ಶಿಕ್ಷಣವನ್ನು ಒಂದು ಸಂಯೋಜಿತ ವ್ಯವಸ್ಥೆಯ ಮೂಲಕ ವಿದ್ಯಾರ್ಥಿಗಳಿಗೆ ನೀಡಬೇಕಾಗಿದೆ.

ಸರ್ಕಾರದಿಂದ ನಿಬದ್ಧವಾದ ಪಠ್ಯಕ್ರಮಕ್ಕೆ ಸೀಮಿತವಾದ ಶಿಕ್ಷಣದಲ್ಲಿ ಮೌಲ್ಯ, ಆದರ್ಶ, ಶಿಸ್ತಿಗೆ ಪ್ರೋತ್ಸಾಹಗಳ ಮಾತಿರಲಿ, ಅವುಗಳಿಗೆ ಯಾವುದೇ ಅವಕಾಶವೂ ಇಲ್ಲದಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಶಾಲಾಕಾಲೇಜುಗಳಲ್ಲಿ ದೊರಕುವ ಶಿಕ್ಷಣಕ್ಕೆ ಪೂರಕವಾಗುವಂತಹ ಶಿಕ್ಷಣವನ್ನು ನಾವು ಸಾಂಸ್ಕೃತಿಕ ಅಥವಾ ಸಾಮಾಜಿಕ ಸಂಸ್ಥೆಗಳ ಮೂಲಕ, ಆವಶ್ಯಕ ಜ್ಞಾನವನ್ನು ಒಳಗೊಂಡ ಪುಸ್ತಕಗಳ ಮೂಲಕ, ಖಾಸಗಿ ಸಂಘ ಸಂಸ್ಥೆಗಳ ಮೂಲಕ, ತರಬೇತಿ ಶಿಬಿರಗಳು ಕಾರ್ಯಾಗಾರಗಳ ಮೂಲಕ, ನೀತಿಬೋಧಕ ಕತೆ, ಚರ್ಚೆ, ಸಂವಾದಗಳ ಮೂಲಕ ಒದಗಿಸಬೇಕು ಹಾಗೂ ಮಕ್ಕಳ ವ್ಯಕ್ತಿತ್ವದ ನಿಜವಾದ ಬೆಳವಣಿಗೆಗೆ ಸಹಕಾರಿಯಾಗುವ ಪರಿಸರವನ್ನು ನಿರ್ಮಾಣ ಮಾಡಬೇಕು. ಪರಿವರ್ತನೆಗೆ ಪೋಷಕವಾಗುವ ಇಂತಹ ಪೂರಕ ಶಿಕ್ಷಣ ಸಾಮಗ್ರಿಗಳನ್ನು ಮಕ್ಕಳಿಗೆ ಒದಗಿಸಬೇಕಾದದ್ದು ವಿಚಾರವಂತ ತಂದೆತಾಯಿಗಳ ಮತ್ತು ಸಮಾಜದ ಕರ್ತವ್ಯ. ಒಂದು ಮಗು 'ವ್ಯಕ್ತಿ'ಯಾಗಿ ಬೆಳೆಯುವ ಪ್ರಕ್ರಿಯೆಯಲ್ಲಿ ಅತ್ಯಂತ ಮುಖ್ಯವಾದುದೆಂದರೆ ಒಬ್ಬರನ್ನೊಬ್ಬರು ಅರ್ಥಮಾಡಿಕೊಂಡು, ಸುತ್ತಮುತ್ತಲಿನವರ ಆವಶ್ಯಕತೆಗಳಿಗೆ ಸ್ಪಂದಿಸಿ ಪ್ರಾಜ್ಞವೂ, ಪ್ರಬುದ್ಧವೂ ಆದ ಜೀವನವನ್ನು ನಡೆಸುವುದು. ಹಾಗೆ ವ್ಯಕ್ತಿತ್ವ ವಿಕಸನಗೊಂಡಾಗ ಜ್ಞಾನದಾಹ, ಕರ್ಮಕೌಶಲ, ಧರ್ಮಶ್ರದ್ಧೆ, ಸಮಾಜಸೇವೆ, ದೇಶಭಕ್ತಿ, ಉತ್ತಮ ನಾಯಕತ್ವ ಮುಂತಾದ ಗುಣಗಳನ್ನು ಯುವಜನಾಂಗದಲ್ಲಿ ಕಾಣುವಂತಾಗುತ್ತದೆ. ಈ ಎಲ್ಲ ಆದರ್ಶಗಳನ್ನೊಳಗೊಂಡ ಮತ್ತು ಪ್ರಾಯೋಗಿಕವಾದ ನಿತ್ಯ-ಸತ್ಯಗಳ ಮೇಲೆ ನಿಂತ, ಸಮಸ್ತ ಮಾನವಕೋಟಿಯ ಹಿತವನ್ನು ಸಾಧಿಸುವ, ಒಂದು ಉನ್ನತ ಸಮಾಜ ನಿರ್ಮಾಣದ ಚಿಂತನೆಯನ್ನು ಸ್ವಾಮಿ ವಿವೇಕಾನಂದರ ಜೀವನ ಮತ್ತು ಕೃತಿಗಳಲ್ಲಿ ಯಥೇಚ್ಛವಾಗಿ ನಾವು ಕಾಣಬಹುದು. ಇಂತಹ ಪ್ರಾಯೋಗಿಕವಾದ, ಸರ್ವಜನ ಹಿತಕಾರಿಯಾದ ಆಲೋಚನೆಗಳು ಬೀಜರೂಪದಲ್ಲಿ ಇದ್ದರೂ ಅದಕ್ಕೆ ತನ್ನದೇ ಆದ ರೀತಿಯಲ್ಲಿ ಮೊಳಕೆಯೊಡೆಯುವ ಸಾಮರ್ಥ್ಯವಿದೆ. ಇದು ಕಾಲಗರ್ಭದಲ್ಲಿ ಸೂಕ್ಷ್ಮವಾಗಿ ಅಡಕವಾಗಿದ್ದು ಭವಿಷ್ಯದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಅಭಿವ್ಯಕ್ತಗೊಳ್ಳುವುದು.

## ಸಮಗ್ರ ಜೀವನದ ವೀಕ್ಷಣೆ

ಸಾವಿರಾರು ವರ್ಷಗಳಿಂದ ಹರಿದು ಬರುತ್ತಿರುವ ಸಾಮಾಜಿಕ ಜೀವನಪ್ರವಾಹದಲ್ಲಿ ನಮ್ಮ ಜೀವನ ಒಂದು ಅಲೆಯಂತೆ. ನಾವು ಅದರ ಒಂದು ಅವಿಭಾಜ್ಯ ಅಂಗವಾದರೂ ಅದರಿಂದ ಅಂತರವನ್ನು ಸಾಧಿಸಿ ಸಾಕ್ಷೀಭಾವದಿಂದ ಈ ಜೀವನಪ್ರವಾಹವನ್ನು ವೀಕ್ಷಿಸುವ ಕಲೆಯನ್ನು ಬೆಳೆಸಿಕೊಳ್ಳಬೇಕು. ಈ ರೀತಿ ದೂರ ನಿಂತು ವೀಕ್ಷಿಸುವುದರಿಂದ ಮಾತ್ರ ಜೀವನದ ಸಮಗ್ರ ಗ್ರಹಿಕೆ ಸಾಧ್ಯವಾಗುತ್ತದೆ. ತನ್ಮೂಲಕ ಜೀವನದ ಧರ್ಮ, ನೀತಿ, ಉದ್ದೇಶಗಳನ್ನು ಅರಿಯಲು ಸಾಧ್ಯವಾಗುತ್ತದೆ. ಕೂಲಂಕಷವಾದ ವೀಕ್ಷಣೆ, ಪರಿಶೀಲನೆ, ಸಂಶೋಧನೆ ಮತ್ತು ಧ್ಯಾನದಿಂದ, ಹುಟ್ಟಿ ಬೆಳೆದು ನಶಿಸುವ ಜೀವನದ ಈ ಪ್ರವಾಹವನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಇದರಿಂದ ಜೀವನವನ್ನು ಅದರ ವಾಸ್ತವತೆಯಲ್ಲಿ ಸ್ವೀಕರಿಸಿ, ಎದುರಿಸಲು ಅವಕಾಶವಾಗುವುದು. ನಮ್ಮ ಜೀವನಯಾತ್ರೆ ಅತ್ಯಂತ ನಿಗೂಢವಾದ ಪಯಣ! ನಮ್ಮ ಬುದ್ಧಿಶಕ್ತಿಗೆ ನಿಲುಕದ ಸೂಕ್ಷ್ಮವಾದ ಬೇರೆ ಬೇರೆ ರೀತಿಯಾದ ಪ್ರಭಾವಗಳು ಪ್ರತಿಯೊಬ್ಬರ ಜೀವನವನ್ನು ರೂಪಿಸುತ್ತಿವೆ. ಅನೇಕಾನೇಕ ಸೂತ್ರಗಳು, ಶಕ್ತಿಗಳು ನಮ್ಮನ್ನು ಗೊಂಬೆಯಂತೆ ಅಗೋಚರವಾಗಿ ಆಡಿಸುತ್ತಿವೆ. ಮನುಷ್ಯನ ಬವಣೆ, ದುಃಖ, ಸಮಸ್ಯೆಗಳನ್ನು ಆಮೂಲಾಗ್ರವಾಗಿ ತೆಗೆದುಹಾಕಲು ಸಾಧ್ಯವಿಲ್ಲ. ಆದರೆ ಋಷಿಗಳು, ಯೋಗಿಗಳು, ಮಹಾಪುರುಷರು, ಮನುಷ್ಯನ ಅಹಂಕಾರದ ಅಸ್ತಿತ್ವವನ್ನು ಅತಿಕ್ರಮಿಸಿ ಅವನಲ್ಲಿ ಸುಪ್ತವಾಗಿರುವ ಉನ್ನತ ಸ್ತರದ ದೈವೀಪ್ರಜ್ಞೆಯನ್ನು ಜಾಗೃತಗೊಳಿಸಿದರು. ನಮ್ಮ ದೇಹ ಮನಸ್ಸಿಗೆ ಅತೀತವಾಗಿರುವಂತಹ ಔನ್ನತ್ಯದ ಪ್ರಜ್ಞಾಸ್ಥಿತಿಯನ್ನು ಧ್ಯಾನದ ಹಾಗೂ ಆಧ್ಯಾತ್ಮದ ಮೂಲಕ, ಯೋಗಮಾರ್ಗದ ಮೂಲಕ ಅಂತಹ ಪ್ರಜ್ಞೆಯನ್ನು ಸಾಕ್ಷಾತ್ಕರಿಸಿಕೊಳ್ಳಬಹುದು ಎಂದು ತಮ್ಮ ಅನುಭವದಿಂದ ಸಾರಿದರು. ಈ ಮಾರ್ಗದಲ್ಲಿ ಮುಂದೆ ಸಾಗಿದರೆ ಮಾತ್ರ ಇಹಜೀವನದ ಸಮಸ್ಯೆಗಳಿಂದ ಮತ್ತು ದುಃಖಗಳಿಂದ ನಾವು ಪಾರಾಗಬಹುದು ಎಂಬುದನ್ನು ಸ್ಪಷ್ಟಪಡಿಸಿದರು.

ಹೀಗೆ ಮನುಷ್ಯ ತನ್ನ ಮನಸ್ಸನ್ನು ಶಿಸ್ತು ಮತ್ತು ವಿವೇಕದ ಬೆಳಕಿನಲ್ಲಿ ಪಳಗಿಸಿ, ಆಂತರಿಕ ವಿಕಾರಗಳನ್ನು ತೊಡೆದುಹಾಕಿ, ತನ್ನ ಆಧ್ಯಾತ್ಮಿಕ ನೆಲೆಯನ್ನು ಕಂಡುಕೊಂಡರೆ ಮಾತ್ರ ತನ್ನ ಅಂತರ್ಯದಲ್ಲಿರುವ ದಿವ್ಯಜ್ಞಾನ ಮತ್ತು ಬೆಳಕನ್ನು ಅನುಭವಿಸಬಹುದು. ಈ ಬೆಳಕಿನ ಪಥದಲ್ಲಿ ಸತ್ಯವನ್ನು ಹುಡುಕುತ್ತಾ ಜೀವನವನ್ನು ನಡೆಸಿದಾಗ ಬಾಳು ಆನಂದಮಯವಾಗುತ್ತದೆ. ಇದೇ ಶ್ರೇಯಸ್ಕರವಾದ ಪರಿಪೂರ್ಣ ಜೀವನ. ✪

## ಸ್ವಾಮಿ ಯೋಗಾನಂದರ ಭಿಕ್ಷಾಟನ ಅನುಭವ



ಶ್ರೀರಾಮಕೃಷ್ಣ ಪರಮಹಂಸರ ಮಹಾಸಮಾಧಿಯ ಅನಂತರ ಅವರ ನೇರ ಶಿಷ್ಯರೆಲ್ಲ ಸಂನ್ಯಾಸವನ್ನು ಸ್ವೀಕರಿಸಿ ಬಾರಾನಗರದಲ್ಲಿ ಮಠವನ್ನು ಪ್ರಾರಂಭಿಸಿ ತೀವ್ರವಾದ ಆಧ್ಯಾತ್ಮಿಕ ಸಾಧನೆಯಲ್ಲಿ ನಿರತರಾದರು. ಮುಂದೆ ಮಠವು ಆಲಂ ಬಜಾರಿಗೆ ಸ್ಥಳಾಂತರಗೊಂಡಿತು. ಜಂಗಮ ಸಂನ್ಯಾಸಿಗಳ ಪದ್ಧತಿಯಂತೆ ಶ್ರೀರಾಮಕೃಷ್ಣರ ನೇರಶಿಷ್ಯರಲ್ಲಿ ಒಬ್ಬರಾದ ಸ್ವಾಮಿ ಯೋಗಾನಂದರು ಒಮ್ಮೆ ಭಿಕ್ಷೆ ಬೇಡುತ್ತ ಆಲಂ ಬಜಾರ್‌ನ ಒಂದು ಗುಡಿಸಿಲಿನ ಬಳಿಗೆ ಬಂದರು. ಬಡ ಹೆಂಗಸೊಬ್ಬಳು ನೆಲವನ್ನು ಗುಡಿಸುತ್ತಿದ್ದಳು. ತರುಣ ಸಂನ್ಯಾಸಿ ಭಿಕ್ಷಕ್ಕೆ ಬಂದಿರುವುದನ್ನು ಕಂಡು ಅವಳು ಕೋಪದಿಂದ "ಹೋಗು ಇಲ್ಲಿಂದ ! ತರುಣನಾಗಿ ಕಾಣಿಸುವೆ. ದುಡಿದು ಸಂಪಾದಿಸುವುದಕ್ಕೇನು ಧಾಡಿ? ಹಗಲು ಹೊತ್ತು ಸಂನ್ಯಾಸಿ ವೇಷದಲ್ಲಿ ಬಂದು ಮನೆಗಳನ್ನೆಲ್ಲ ನೋಡಿಕೊಂಡು ಹೋಗಿ ರಾತ್ರಿ ಕಳ್ಳತನ ಮಾಡುವುದು" ಎಂದು ಬೈದು ಕಸಪೊರಕೆಯನ್ನು ನೆಲಕ್ಕೆ ಬಡಿದಳು. ಬಂದ ನಗುವನ್ನು ತಡೆದುಕೊಂಡ ಯೋಗಾನಂದರು, ಮಠಕ್ಕೆ ಹಿಂದಿರುಗಿದ ಮೇಲೆ ಆ ಹೆಂಗಸಿನ ಆರ್ಭಟವನ್ನು ಎಲ್ಲರ ಮುಂದೆ ಅಭಿನಯಿಸಿ ತೋರಿಸಿದರು. ಎಲ್ಲರೂ ಹೊಟ್ಟೆ ಹುಣ್ಣಾಗುವಂತೆ ನಕ್ಕು, ನೆಲದ ಮೇಲೆ ಬಿದ್ದು ಹೊರಳಾಡಿದರು. ಯೋಗಾನಂದರಿಗೆ ಹಾಸ್ಯಪ್ರಜ್ಞೆ ಚೆನ್ನಾಗಿತ್ತು; ಜೊತೆಗೆ ಅವರು ವೈರಾಗ್ಯದಿಂದ ಪ್ರಜ್ವಲಿಸುತ್ತಿದ್ದ ಯತಿಗಳಾಗಿದ್ದರು. ✪